ಜಿಲ್ಲಾಧಿಕಾರಿಗಳ ಕಾರ್ಯಾಲಯ, ಶಿವಮೊಗ್ಗ ಜಿಲ್ಲೆ, ಶಿವಮೊಗ್ಗ

OFFICE OF THE DEPUTY COMMISSIONER, SHIMOGA. -577201.

ದೂರವಾಣಿ : 08182-222174
Telephone: 08182-277082 (Fax)

Email: mojiniddshimoga@gmail.com
Website: http://www.shimoga.nic.in

ನಂ.ಸಿಬ್ಬಂದಿ.ಆಕಾರಬಂದ್.04/2017-18(68003) ದಿನಾಂಕ:25-04-2017

# ಅಲ್ಪಾವಧಿ ಇ-ಟೆಂಡರ್ ಪ್ರಕಟಣೆ

## (ಇ-ಪ್ರೊಕ್ಯೂರ್ ಮೆಂಟ್ ಪೋರ್ಟಲ್ ಮೂಲಕ ಮಾತ್ರ)

ಶಿವಮೊಗ್ಗ ಜಿಲ್ಲೆಯ ತಹಶೀಲ್ದಾರ ಕಾರ್ಯಾಲಯಗಳ ಭೂಮಾಪನ ವಿಭಾಗದ ಆಕಾರ ಬಂದ ದಾಖಲೆಗಳನ್ನು ಡಾಟಾ ಎಂಟ್ರಿ ಮಾಡಲು ತೀರ್ಮಾನಿಸಲಾಗಿದೆ. ಕಾರಣ The Karnataka Transparency in Public Procurements Act, 1999 and 2000 (as amended by Act 21 of 2001 and 4 of 2003) ಮತ್ತು 27ನೇ ನಿಯಮದಂತೆ ಡಾಟಾ ಎಂಟ್ರಿ ಆಪರೇಟರ್ ಹಾಗೂ ಕಂಪ್ಯೂಟರ್ ಪರಿಕರಗಳನ್ನು ಹೊಂದಿರುವ ನೋಂದಾಯಿತ ಪೂರ್ವಾರ್ಹತೆಯುಳ್ಳ ಟೆಂಡರುದಾರರಿಂದ (Prequalified tenderers duly empanelled by e-governance) ಈ ಕೆಳಕಂಡ ಪರತ್ತುಗಳಿಗೆ ಒಳಪಟ್ಟು ಆನ್ ಲೈನ್ ಮೂಲಕ ಟೆಂಡರ್ ಗಳನ್ನು ಆಹ್ವಾನಿಸಲಾಗಿದೆ. ಟೆಂಡರನ್ನು ಇ-ಪ್ರೊಕ್ಯೂರಮೆಂಟ್ ಪೋರ್ಟಲ್ https://eproc.karnataka.gov.in ಮುಖಾಂತರ ಅರ್ಜಿ ಸಲ್ಲಿಸತಕ್ಕದ್ದು.

| ಅಲ್ಪಾವಧಿ ಇ-ಟೆಂಡರ್ ಘಟನಾವಳಿಗಳು | | |
|---|---|---|
| 1 | ಖಾಲಿ ಟೆಂಡರ್ ಫಾರಂ ಬೆಲೆ | ಇ-ಪ್ರೊಕ್ಯೂರಮೆಂಟ್ ಪೋರ್ಟಲ್ ಪ್ರಕಾರ ಮಾತ್ರ |
| 2 | ಆನ್ ಲೈನ್ ಟೆಂಡರ್ ಸಲ್ಲಿಸುವ ಕೊನೆಯ ದಿನಾಂಕ | ದಿನಾಂಕ:10-05-2017 ರ ಸಾಯಂಕಾಲ 4.30 ರವರೆಗೆ |
| 3 | ಆನ್ ಲೈನ್ ಟೆಂಡರ್ ತೆರೆಯುವ ಸ್ಥಳ | ಜಿಲ್ಲಾಧಿಕಾರಿಗಳ ಕಛೇರಿ, ಶಿವಮೊಗ್ಗ |
| 4 | ಆನ್ ಲೈನ್ ತಾಂತ್ರಿಕ ಲಕೋಟೆ ತೆರೆಯುವ ದಿನಾಂಕ/ಸಮಯ | ದಿನಾಂಕ:12-05-2017 ಪೂರ್ವಾಹ್ನ 12.00 ಗಂಟೆಗೆ |
| 5 | ಆನ್ ಲೈನ್ ಆರ್ಥಿಕ ಲಕೋಟೆ ತೆರೆಯುವ ದಿನಾಂಕ/ಸಮಯ | ದಿನಾಂಕ:16-05-2017 ಸಂಜೆ-4-00 ಗಂಟೆಗೆ |
| 6 | ಇ.ಎಂ.ಡಿ.ಮೊತ್ತ | ರೂ. 1,50,000/ e– payment or NEFT ಮೂಲಕ ಪಾವತಿ ಮಾಡುವುದು. |

ಷರತ್ತುಗಳು:

1) ಆಕಾರ ಬಂದ ಡಾಟಾ ಎಂಟ್ರಿ ಮಾಡುವ 01 ಸಾಲಿಗೆ (LINE) ಒಂದು ಘಟಕವಾಗಿ ಪರಿಗಣಿಸಲಾಗುವುದು. ಪ್ರತಿಯೊಂದು ಸಾಲಿಗೆ ದರ ನಮೂದಿಸತಕ್ಕದ್ದು. ಇದರಲ್ಲಿ ಡಾಟಾ ಎಂಟ್ರಿ ಮಾಡಿ, ಪರಿಶೀಲನೆಗಾಗಿ ಒಂದು ಪ್ರಿಂಟ್ ನೀಡುವುದು ಹಾಗೂ ಪರಿಶೀಲನೆ ನಂತರ ಅಂತಿಮ ಮುದ್ರಣ ಮಾಡಿ, ಗ್ರಾಮವಾರು ಪುಸ್ತಕ ಬೈಂಡ್ ಮಾಡುವುದು ಒಳಗೊಂಡಿರತಕ್ಕದ್ದು.
2) ಆಸಕ್ತಿಯುಳ್ಳ ಸಂಸ್ಥೆ/ಏಜೆನ್ಸಿಯವರು ತಾಲೂಕುವಾರು (ಒಂದು ಅಥವಾ ಒಂದಕ್ಕಿಂತ ಹೆಚ್ಚು ಆದರೆ ಗರಿಷ್ಠ 03 ತಾಲೂಕುಗಳಿಗೆ ಮಾತ್ರ) ಟೆಂಡರ್ ಸಲ್ಲಿಸಬಹುದು.
3) ಟೆಂಡರ್ ಪ್ರಕ್ರಿಯೆ ಮೂಲಕ ಆಯ್ಕೆಯಾಗುವ L1 ಸಂಸ್ಥೆಗೆ ಕಾರ್ಯಾದೇಶವನ್ನು ನೀಡುವ ಮೊದಲು ಕೇಂದ್ರ ಕಛೇರಿಯಿಂದ ಅನುಮತಿ ಪಡೆದು ನಂತರ ನೀಡಲಾಗುವುದು . ಕಾರ್ಯಾದೇಶ ನೀಡಿದ ತಕ್ಷಣ ತತ್ಸಂಬಂಧ ಸಂಸ್ಥೆಯವರು ಕೆಟಿಪಿಪಿ ಕಾಯ್ದೆಯನ್ವಯ ಬ್ಯಾಂಕ್ ಗ್ಯಾರಂಟಿಯನ್ನು ನೀಡುವುದು.
4) ಆಯುಕ್ತರು ಭೂಮಾಪನ ಇಲಾಖೆ ಬೆಂಗಳೂರು ರವರ ಪತ್ರ ಸಂಖ್ಯೆ/SSLR/13019/60/2016-PMU-SSLR DT:23-11-2016 ರಂತೆ ತಂತ್ರಾಂಶವನ್ನು ತಾಲೂಕಿನ ಭೂಮಿ ಸರ್ವರಿನಲ್ಲಿ ಅಳವಡಿಸಲಾಗಿದ್ದು, ಡಾಟಾ ಎಂಟ್ರಿ ಕಾರ್ಯ ಪೂರ್ಣಗೊಂಡ ನಂತರ ಭೂಮಿ ತಾಲ್ಲೂಕು ಸರ್ವರಿಗೆ Data Port ಮಾಡುವುದು. ಇದಕ್ಕೆ ಅವಶ್ಯವಾದ ಸಹಕಾರವನ್ನು ಜಿಲ್ಲಾ ಸಮಾಲೋಚಕರಿಂದ ಪಡೆಯುವುದು.
5) ಡಾಟಾ ಎಂಟ್ರಿ ಕಾರ್ಯವನ್ನು ಕಡ್ಡಾಯವಾಗಿ ಆಯಾ ತಾಲೂಕಿನ ತಹಶೀಲ್ದಾರರ ಕಾರ್ಯಾಲಯದಲ್ಲಿ ಕಂದಾಯ ಇಲಾಖೆಯ ಅಧಿಕಾರಿಗಳು/ಸಿಬ್ಬಂದಿಗಳ ಮೇಲುಸ್ತುವಾರಿಯಲ್ಲಿ ನಿರ್ವಹಿಸತಕ್ಕದ್ದು.
6) ಈ ಕಾರ್ಯ ಕೈಗೊಳ್ಳಲು ಒಂದು ಪಕ್ಷ ತಾಲ್ಲೂಕು ಕಛೇರಿಯಲ್ಲಿ ಸಾಕಷ್ಟು ಸ್ಥಳಾವಕಾಶ ಲಭ್ಯವಿಲ್ಲದೇ ಇದ್ದಲ್ಲಿ ಟೆಂಡರ್ ದಾರರೇ ಭೂಮಾಪನ ಕಛೇರಿಗೆ ಆದಷ್ಟು ಹತ್ತಿರವಿರಬಹುದಾದಂತಹ ಸೂಕ್ತ ಸ್ಥಳಾವಕಾಶವನ್ನು ಗುರುತಿಸಿಕೊಂಡು ತಮ್ಮ ವೆಚ್ಚದಲ್ಲಿಯೇ ಗಣಕೀಕರಣ ಕೇಂದ್ರವನ್ನು ಸ್ಥಾಪಿಸಿಕೊಂಡು ಕಾರ್ಯ ನಿರ್ವಹಿಸುವುದು.
7) ಪರಿಶೀಲನೆಗಾಗಿ ಮತ್ತು ಅಂತಿಮ ಮುದ್ರಣಕ್ಕಾಗಿ, ತಂತ್ರಾಂಶದಲ್ಲಿ ಒದಗಿಸಿರುವಂತೆ A3 ಪ್ರಮಾಣದ ಹಾಳೆಗಳ ಎರಡು ಬದಿಯಲ್ಲಿ ಮುದ್ರಿಸುವುದು.
8) ಡಾಟಾ ಎಂಟ್ರಿ ಕಾರ್ಯ ಪೂರ್ಣಗೊಂಡು ಅಂತಿಮ ಮುದ್ರಣ ನಂತರ ಗ್ರಾಮವಾರು 45x30 ಗಾತ್ರದ ಪುಸ್ತಕಗಳನ್ನು 32 ಅಂಶದ straw Board ದಿಂದ ಬೈಂಡ್ ಮಾಡಿಸಿ, ತಹಶೀಲ್ದಾರರಿಗೆ ಹಸ್ತಾಂತರಿಸುವುದು. ಪೂರ್ಣಗೊಳಿಸಲಾದ ಡಾಟಾ ಎಂಟ್ರಿ ವಿವರಗಳ SOFT ಪ್ರತಿ (CD/DVD)ಗಳನ್ನು ತಹಶೀಲ್ದಾರರಿಗೆ ಸಲ್ಲಿಸತಕ್ಕದ್ದು

9) ಡಾಟಾ ಎಂಟ್ರಿ ಕಾರ್ಯಕ್ಕೆ ಗಣಕಯಂತ್ರ, ಪ್ರಿಂಟರ್ ಇತ್ಯಾದಿ ಸೌಲಭ್ಯಗಳನ್ನು ನಿಗದಿತ ಸಮಯದಲ್ಲಿ ಡಾಟಾ ಎಂಟ್ರಿ ಕಾರ್ಯವು ಪೂರ್ಣಗೊಳಿಸುವ ಪ್ರಮಾಣಕ್ಕೆ ಪೂರಕ ಸಂಖ್ಯೆಯಲ್ಲಿ ಅಳವಡಿಸತಕ್ಕದ್ದು. ಹಾಗೂ ಡಾಟಾ ಎಂಟ್ರಿ ಕಾರ್ಯಕ್ಕೆ ಅವಶ್ಯಕವಿರುವ ಪೀಠೋಪಕರಣಗಳು ತಾವೇ ವ್ಯವಸ್ಥೆ ಮಾಡಿಕೊಳ್ಳತಕ್ಕದ್ದು.

10) ಡಾಟಾ ಎಂಟ್ರಿ ಕಾರ್ಯವನ್ನು ನಿರ್ವಹಿಸಲು Internet/LAN ಅಗತ್ಯವಿದ್ದ ಪಕ್ಷದಲ್ಲಿ ಸಂಸ್ಥೆಯವರೇ ಸೌಲಭ್ಯವನ್ನು ಮಾಡಿಕೊಳ್ಳುವುದು.

11) ಡಾಟಾ ಎಂಟ್ರಿ ಮಾಡುವ ಪ್ರತಿಯೊಂದು ವಿವರವೂ ಗೌಪ್ಯ ಮತ್ತು ಮಹತ್ವದ್ದಾಗಿದ್ದು ಕರ್ನಾಟಕ ಸರ್ಕಾರದ ಸ್ವಾಮ್ಯಕ್ಕೆ ಒಳಪಡುತ್ತದೆ. ಸಂಸ್ಥೆ/ಏಜೆನ್ಸಿಯು ಯಾವುದೇ ರೂಪದಲ್ಲಿ ಡಾಟಾ ಎಂಟ್ರಿ ವಿವರಗಳನ್ನು ಬಳಸಿಕೊಳ್ಳತಕ್ಕದ್ದಲ್ಲ ಅಥವಾ ಪ್ರಕಟ ಪಡಿಸುವಂತಿಲ್ಲ. ಒಂದು ವೇಳೆ ಸಂಸ್ಥೆ/ಏಜೆನ್ಸಿಯು ಈ ವಿವರಗಳನ್ನು ದುರುಪಯೋಗಪಡಿಸಿರುವುದು ಕಂಡು ಬಂದರೆ ಕ್ರಿಮಿನಲ್ ಮೊಕದ್ದಮೆಯನ್ನು ದಾಖಲಿಸಿ ಸಂಸ್ಥೆ/ಏಜೆನ್ಸಿಯನ್ನು ಕಪ್ಪು ಪಟ್ಟಿಗೆ ಸೇರಿಸಲು ಕ್ರಮ ಜರಗಿಸಲಾಗುವುದು.

12) ಡಾಟಾ ಎಂಟ್ರಿ ಮಾಡಿದ ನಮೂದಿನಲ್ಲಿ ತಪ್ಪಿದ್ದಲ್ಲಿ ಅಂತಹ ತಪ್ಪಿಗೆ ಹಣ ಸಂದಾಯ ಮಾಡದೆ ದಂಡ ವಿಧಿಸಲಾಗುವುದು.

13) ಯಶಸ್ವಿ ಏಜೆನ್ಸಿ/ಸಂಸ್ಥೆಯವರಿಗೆ ಕಾರ್ಯಾದೇಶ ನೀಡಿದ 07 ದಿನಗಳ ಒಳಗಾಗಿ ಗಣಕೀಕರಣ (ಡಾಟಾ ಎಂಟ್ರಿ ಕಾರ್ಯವನ್ನು ಪ್ರಾರಂಭಿಸತಕ್ಕದ್ದು. 15 ದಿನಗಳ ಒಳಗೆ ಕೆಲಸ ಪ್ರಾರಂಭಿಸದಿದ್ದಲ್ಲಿ ಅಂತಹ ಸಂಸ್ಥೆಗೆ ನೀಡಲಾದ ಕಾರ್ಯಾದೇಶವನ್ನು ರದ್ದುಪಡಿಸಿ EMD ಮೊತ್ತವನ್ನು ಮುಟ್ಟುಗೋಲು ಹಾಕಿಕೊಳ್ಳಲಾಗುವುದು.

14) ಗಣಕೀಕರಣ ಕಾರ್ಯವನ್ನು ತಾಲ್ಲೂಕುವಾರು ಪ್ರಾರಂಭಿಸಿದಲ್ಲಿ ಒಂದು ತಾಲ್ಲೂಕಿನ ಒಟ್ಟು ಗ್ರಾಮಗಳ ಡಾಟಾ ಎಂಟ್ರಿ ಕಾರ್ಯವನ್ನು 60 ದಿನಗಳೊಳಗೆ ಹಾಗೂ ಹೋಬಳಿವಾರು ಪ್ರಾರಂಭಿಸಿದಲ್ಲಿ ಒಂದು ಹೋಬಳಿಯಲ್ಲಿನ ಒಟ್ಟು ಗ್ರಾಮಗಳ ಡಾಟಾ ಎಂಟ್ರಿಯನ್ನು 15 ದಿನಗಳೊಳಗೆ ಪೂರ್ಣಗೊಳಿಸುವುದು.

15) ಆಯ್ಕೆಯಾದ ಸಂಸ್ಥೆಯು ಕಾರ್ಯಾದೇಶ ನೀಡಲಾದ ಗಣಕೀಕರಣ ಕಾರ್ಯವನ್ನು ಸಂಪೂರ್ಣವಾಗಿ ನಿರ್ವಹಿಸಲು ವಿಫಲರಾದಲ್ಲಿ ತತ್ಸಂಬಂಧ ಸಂಸ್ಥೆಯ ಬ್ಯಾಂಕ್ ಗ್ಯಾರಂಟಿ ಮೊತ್ತವನ್ನು ಮತ್ತು ಪಾವತಿಸಲು ಬಾಕಿ ಇರುವ ಮೊತ್ತದೊಂದಿಗೆ ಮುಟ್ಟುಗೋಲು ಹಾಕಿಕೊಳ್ಳಲಾಗುವುದು.

16) ಆಯ್ಕೆಯಾದ L1 ಸಂಸ್ಥೆಯು ಆಕಾರಬಂದ್ ಡಾಟಾ ಎಂಟ್ರಿ ಪೂರೈಸಿರುವ ಗ್ರಾಮಗಳಿಗೆ ಸೇವಾ ಶುಲ್ಕವನ್ನು ಈ ಕೆಳಗಿನಂತೆ ಹಂತಗಳಲ್ಲಿ ಪಾವತಿಸಲಾಗುವ ತತ್ಸಂಬಂಧ ಸಂಸ್ಥೆಗೆ ಪ್ರತಿ ಹಂತದಲ್ಲಿಯೂ ಇಲಾಖೆಯಿಂದ ಹಣ ಪಾವತಿಸುವ ಸಮಯದಲ್ಲಿ ಈ ಕಾರ್ಯಕ್ಕೆ ಅನ್ವಯವಾಗುವ ತೆರಿಗೆಗಳನ್ನು ಆಯಾ ಆರ್ಥಿಕ ವರ್ಷದಲ್ಲಿ ಜಾರಿಯಲ್ಲಿರುವಂತೆ ಈ ಮೊತ್ತದಲ್ಲಿ ಕಟಾಯಿಸಿ ಉಳಿಕೆ ಮೊತ್ತವನ್ನು ಪಾವತಿಸಲಾಗುವುದು.

- ಅವರಿಗೆ ವಹಿಸಿದ ಕಾರ್ಯದ ಶೇ.25% ಪೂರ್ಣಗೊಳಿಸಿದಲ್ಲಿ – ಶೇ.20% ಹಣ ಪಾವತಿಸಲಾಗುವುದು.
- ಅವರಿಗೆ ವಹಿಸಿದ ಕಾರ್ಯದ ಶೇ.50% ಪೂರ್ಣಗೊಳಿಸಿದಲ್ಲಿ – ಶೇ.20% ಹಣ ಪಾವತಿಸಲಾಗುವುದು.
- ಅವರಿಗೆ ವಹಿಸಿದ ಕಾರ್ಯದ ಶೇ.75% ಪೂರ್ಣಗೊಳಿಸಿದಲ್ಲಿ – ಶೇ.20% ಹಣ ಪಾವತಿಸಲಾಗುವುದು.
- ಅವರಿಗೆ ವಹಿಸಿದ ಕಾರ್ಯದ ಶೇ.100% ಪೂರ್ಣಗೊಳಿಸಿದಲ್ಲಿ - ಉಳಿದ ಶೇ.40% ಹಣ ಪಾವತಿಸಲಾಗುವುದು.

17) ಡಾಟಾ ಎಂಟ್ರಿ ಆಪರೇಟರುಗಳು ಪಿಯುಸಿ ವಿದ್ಯಾರ್ಹತೆ ಹೊಂದಿದ್ದು, ಕಂಪ್ಯೂಟರನಲ್ಲಿ ಶೈಕ್ಷಣಿಕ ಅರ್ಹತೆಯೊಂದಿಗೆ ಕನ್ನಡ, ಇಂಗ್ಲೀಷ ಓದಲು ಟೈಪ್ ಮಾಡಲು (ಕನ್ನಡ ಯುನಿಕ್ ಕೋಡ್) ಅರ್ಹತೆಯನ್ನು ಹೊಂದಿರಬೇಕು.

18) ಆಕಾರಬಂದಿನಲ್ಲಿ ದಾಖಲಾಗಿರುವ ಮಾಹಿತಿಯನ್ನು ಯಥಾವತ್ತಾಗಿ ಗಣಕೀಕರಣಗೊಳಿಸುವುದು.

19) ತಾಲೂಕಾ ಕಛೇರಿಯಲ್ಲಿನ ಡಾಟಾ ಎಂಟ್ರಿ ಮಾಡಬೇಕಾದ ದಾಖಲೆಗಳನ್ನು ಕಛೇರಿ ವೇಳೆಯಲ್ಲಿ ಪರಿಶೀಲಿಸಬಹುದು.

20) ತಪ್ಪಾಗಿರುವ ಆಕಾರಬಂದ ಡಾಟಾ ಎಂಟ್ರಿಗಳನ್ನು ಸರಿಪಡಿಸಿ, ಮತ್ತೊಂದು ಪ್ರತಿಯನ್ನು ಮುದ್ರಿಸಿ ನೀಡುವುದು.

21) ನಿಗದಿತ ಸಮಯದಲ್ಲಿ ಡಾಟಾ ಎಂಟ್ರಿ ಕಾರ್ಯವನ್ನು ಪೂರ್ಣಗೊಳಿಸಲು ಅಗತ್ಯ ಸಂಖ್ಯೆಯ ಗಣಕಯಂತ್ರ ವ್ಯವಸ್ಥೆ, ಆಪರೇಟರ್ ಸೇವೆಯನ್ನು ಒದಗಿಸುವುದು

22) ಡಾಟಾ ಎಂಟ್ರಿ ಕಾರ್ಯದ ತಾಲ್ಲೂಕುವಾರು ಹಾಗೂ ಅವಶ್ಯಕವಿರುವ ಗಣಕಯಂತ್ರಗಳ ವಿವರಗಳನ್ನು ಅನುಬಂಧ-1 ರಲ್ಲಿ ನೀಡಲಾಗಿದೆ.

<u>ನಿಬಂಧನೆಗಳು:</u>

1) ಟೆಂಡರನಲ್ಲಿ ಭಾಗವಹಿಸುವ ಸಂಸ್ಥೆಯು ಉದ್ದಿಮೆ ಪರವಾನಿಗೆ ನೊಂದಣಿಯಾದ ಸಂಸ್ಥೆಯಾಗಿರಬೇಕು.
2) ಪಾನ್ ಕಾರ್ಡ ನೋಂದಣಿ ಹೊಂದಿರತಕ್ಕದ್ದು.
3) ಟೆಂಡರನಲ್ಲಿ ಭಾಗವಹಿಸುವ ಸಂಸ್ಥೆಯು ಕಳೆದ 3 ವರ್ಷದ ಆದಾಯ ತೆರಿಗೆ ಪಾವತಿಸಿರುವ ಕುರಿತು ದಾಖಲೆ ಸಲ್ಲಿಸತಕ್ಕದ್ದು.
4) ಟೆಂಡರದಾರರು ಸೇವಾ ತೆರಿಗೆ ನೋಂದಣಿ ಹೊಂದಿರತಕ್ಕದ್ದು. ಸೇವಾ ತೆರಿಗೆ ಪಾವತಿಸಿದ ದಾಖಲೆಗಳನ್ನು ಸಲ್ಲಿಸತಕ್ಕದ್ದು.
5) ಟೆಂಡರದಾರರು ಈ ಹಿಂದೆ ಇಂತಹ ಕೆಲಸ ನಿರ್ವಹಿಸಿದ ಅನುಭವ ಪ್ರಮಾಣ ಪತ್ರ ನೀಡತಕ್ಕದ್ದು.
6) ಟೆಂಡರದಾರರು ಕಪ್ಪು ಪಟ್ಟಿಗೆ ಸೇರಿರಬಾರದು. ಈ ಕುರಿತು ಪ್ರತಿಜ್ಞಾ ಪತ್ರ ನೀಡುವುದು.
7) ಟೆಂಡರದಾರರು ಹೊಂದಿರುವ ಮೂಲ ಸೌಕರ್ಯಗಳ ವಿವರ ನೀಡುವುದು.

8) ತಾಂತ್ರಿಕ ಬಿಡ್‌ನಲ್ಲಿ ಅರ್ಹತೆಯನ್ನು ಪಡೆದ ಸಂಸ್ಥೆ/ಏಜೆನ್ಸಿಯವರನ್ನು ಮಾತ್ರ ಹಣಕಾಸು ಬಿಡ್‌ಗೆ ಪರಿಗಣಿಸಲಾಗುವುದು.

9) ಯಶಸ್ವಿಯಾದ ಟೆಂಡರದಾರರು ರೂ 25000 ಸಾವಿರ ಭದ್ರತಾ ಠೇವಣಿಯನ್ನಾಗಿ ಬ್ಯಾಂಕ್ ಗ್ಯಾರಂಟಿ ನೀಡುವುದು.

10) ಟೆಂಡರದಾರರು ತೃಪ್ತಿಕರವಾದ ಸೇವೆ ನೀಡದಿದ್ದಲ್ಲಿ ಭದ್ರತಾ ಠೇವಣಿಯನ್ನು ಮುಟ್ಟುಗೋಲು ಹಾಕಿಕೊಂಡು ದಂಡವನ್ನು ವಿಧಿಸಲಾಗುವುದು.

11) ಆನ್ ಲೈನ್ ನಲ್ಲಿ ಸ್ವೀಕೃತವಾಗುವ ಯಾವುದೇ ಟೆಂಡರ್ ಗಳನ್ನು ಒಪ್ಪುವ ಅಥವಾ ಯಾವುದೇ ಕಾರಣಗಳನ್ನು ನೀಡದೇ ಟೆಂಡರ್ ಗಳನ್ನು ತಿರಸ್ಕರಿಸುವ ಅಧಿಕಾರವನ್ನು ಜಿಲ್ಲಾಧಿಕಾರಿಗಳು ಕಾಯ್ದಿರಿಸಿಕೊಂಡಿರುತ್ತಾರೆ.

12) ಯಶಸ್ವಿ ಟೆಂಡರ್ ದಾರರಿಗೆ ನೀಡಿದ ಆದೇಶವನ್ನು ಯಾವುದೇ ಹಂತದಲ್ಲಿ ರದ್ದುಪಡಿಸುವ ಅಧಿಕಾರವನ್ನು ಜಿಲ್ಲಾಧಿಕಾರಿಗಳು ಹೊಂದಿರುತ್ತಾರೆ.

13) ಟೆಂಡರ್ ಷರತ್ತುಗಳ ಎಲ್ಲಾ ನಿಬಂಧನೆಗಳಿಗೆ ಒಪ್ಪಿರುವುದರ ಬಗ್ಗೆ ಯಶಸ್ವಿಯಾದ ಟೆಂಡರುದಾರರು ರೂ. 100/- ಛಾಪಾ ಕಾಗದಲ್ಲಿ ಮುಚ್ಚಳಿಕೆ ಪತ್ರವನ್ನು ಈ ಕಾರ್ಯಲಯಕ್ಕೆ ಬರೆದು ನೀಡತಕ್ಕದ್ದು.

14) ಹೆಚ್ಚಿನ ವಿವರಗಳಿಗಾಗಿ ಈ ಕಾರ್ಯಾಲಯವನ್ನು ಖುದ್ದಾಗಿ ಕಚೇರಿ ವೇಳೆಯಲ್ಲಿ (ಸರ್ಕಾರಿ ರಜಾ ದಿನಗಳನ್ನು ಹೊರತುಪಡಿಸಿ) ಸಂಪರ್ಕಿಸಬಹುದಾಗಿದೆ. ಅಥವಾ ದೂರವಾಣಿ ಸಂಖ್ಯೆ: 08182-222174 ಜಿಲ್ಲಾಧಿಕಾರಿಗಳ ಕಛೇರಿ, ಭೂಮಾಪನ ಶಾಖೆಗೆ ಸಂಪರ್ಕಿಸಿ ಮಾಹಿತಿ ಪಡೆಯಬಹುದಾಗಿದೆ. ಹಾಗೂ ವೆಬ್ ಸೈಟ್ : :https://eproc.karnataka.gov.in ನಲ್ಲಿ ಲಾಗಿನ್ ಮಾಡಿ ಪಡೆಯಬಹುದು.

15) ಪ್ರಸ್ತುತ ಟೆಂಡರ್ ಪ್ರಕಟಣೆಯನ್ನು Website Address : http://www.Shimoga.nic.in ನಲ್ಲೂ ವೀಕ್ಷಿಸಬಹುದಾಗಿದೆ.

ಜಿಲ್ಲಾಧಿಕಾರಿ,
ಶಿವಮೊಗ್ಗ ಜಿಲ್ಲೆ.

ಪ್ರತಿಯನ್ನು:-

1. ಆಯುಕ್ತರು, ಭೂಮಾಪನ ಕಂದಾಯ ವ್ಯವಸ್ಥೆ ಮತ್ತು ಭೂದಾಖಲೆಗಳ ಇಲಾಖೆ, ಕೆ.. ಆರ್. ವೃತ್ತ, ಬೆಂಗಳೂರು, ರವರಿಗೆ ಮಾಹಿತಿ ಕುರಿತು ಸಲ್ಲಿಸಿದೆ.
2. ಪ್ರೋಗ್ರಾಮರ್, ಶಿವಮೊಗ್ಗ ಇವರಿಗೆ ಪ್ರಸ್ತುತ ಇ-ಟೆಂಡರ್ ಪ್ರಕಟಣೆಯನ್ನು https://eproc.karnataka.gov.in ನಲ್ಲಿ ಅಳವಡಿಸಿ ಈ ಕಛೇರಿಗೆ ವರದಿ ಸಲ್ಲಿಸಲು ತಿಳಿಸಿದೆ. ಹಾಗೂ ಟೆಂಡರ್ ತೆರೆಯುವ ದಿನ/ಸಮಯದಲ್ಲಿ ಈ ಕಛೇರಿಯಲ್ಲಿ ಹಾಜರಾಗಲು ತಿಳಿಸಿದೆ.

3. ಡಿಸ್ಟ್ರಿಕ್ ಇನಫಾರ್ಮೇಟಿಕ್ ಆಫೀಸರ್, ಎನ್.ಐ.ಸಿ. ಶಿವಮೊಗ್ಗ ಇವರಿಗೆ ಸದರಿ ಪ್ರಕಟಣೆಯನ್ನು Website Address : http://www.Shimoga.nic.in ನಲ್ಲಿ ಅಳವಡಿಸಲು ಹಾಗೂ ಟೆಂಡರ್ ತೆರೆಯುವ ದಿನ/ ಸಮಯದಲ್ಲಿ ಈ ಕಚೇರಿಯಲ್ಲಿ ಹಾಜರಿರಲು ತಿಳಿಸಿ ಕಳುಹಿಸಿದೆ.
4. ಈ ಕಾರ್ಯಾಲಯದ ಟೆಂಡರ್ ಬುಲೆಟನ್ ವಿಭಾಗಕ್ಕೆ ವಾರಾಂತ್ಯದ ಟೆಂಡರ್ ಬುಲೆಟನಲ್ಲಿ ಪ್ರಕಟಿಸಲು ಪ್ರತಿಗಳನ್ನು ಕಳುಹಿಸಿದೆ.
5. ಈ ಕಾರ್ಯಾಲಯದ ಸೂಚನಾ ಫಲಕಕ್ಕೆ.

# ಅನುಬಂಧ-1

## ಡಾಟಾ ಎಂಟ್ರಿ ಮಾಡಬೇಕಾದ ಆಕಾರಬಂದ ವಿವರಗಳ ಅಂದಾಜು

| ಕ್ರ.ಸಂ | ತಾಲೂಕು | ಅಂದಾಜಿಸಲಾದ ಸಾಲುಗಳ/ಸರ್ವೆ ನಂಬರ/ಹಿಸ್ಸಾಗಳು | ಅವಶ್ಯಕತೆ ಇರುವ ಗಣಕಯಂತ್ರಗಳ/ ಆಪರೇಟರ್‌ಗಳ ಅಂದಾಜು ಸಂಖ್ಯೆ |
|---|---|---|---|
| 1 | ಶಿವಮೊಗ್ಗ | 93580 | 06 |
| 2 | ಭದ್ರಾವತಿ | 78157 | 05 |
| 3 | ತೀರ್ಥಹಳ್ಳಿ | 65000 | 04 |
| 4 | ಸಾಗರ | 65085 | 04 |
| 5 | ಸೊರಬ | 75504 | 05 |
| 6 | ಶಿಕಾರಿಪುರ | 95680 | 06 |
| 7 | ಹೊಸನಗರ | 45000 | 03 |
| | **ಒಟ್ಟು** | **518006** | **33** |

## OFFICE OF THE DEPUTY COMMISSIONER, SHIMOGA

### TENDER APPLICATION FORM No-1

**(Technical Bid)**

| | | |
|---|---|---|
| 1 | Name of Bidder,<br>Telephone Number & Complete Address | |
| 2 | Company/Firm Registration details;<br>(Enclose Certificate) | |
| 3 | CST/KST Registration No And Validity | |
| 4 | Details of Data Entry work done earlier; (Enclose at least 3 documents in support of these details). | |
| 4 | Details Financial Turnover for the Last 3 years (2013-14 to 2015-16)<br>(Enclose CA Audited documents in support of these details). | |
| 5 | Documents regarding availability of:<br>a) Computers available<br>b) No. of Data Entry Operators.<br>c) No. of Servers<br>d) No. of Printers<br>e) No. of UPS/Generators | |

Certified that, I have read all the terms & conditions of the tender conditions and document enclosed in support to supplies are correct.

Place :

Date :

Signature of Bidder

## OFFICE OF THE DEPUTY COMMISSIONER, Shimoga

### TENDER APPLICATION FORM No-2

**(Financial Bid)**

| | | |
|---|---|---|
| 1 | Name of Bidder,<br><br>Name of the Contact Person<br><br>Mobile No<br><br>Complete Address | |
| 2 | **Rates Quoted per Line**<br><br>**(including printing of check-list & Binding)** | |

Certified that, I have read all the terms & conditions of the tender conditions and document enclosed in support to supplies are correct.

Place :

Date : Signature of Bidder